# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1278 |
| ಸದಸ್ಯರ ಹೆಸರು | : | ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ |
| ಉತ್ತರಿಸುವ ದಿನಾಂಕ | : | 17-03-2021 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಂಖ್ಯೆ ಎಷ್ಟು; ಇವರುಗಳ ಸಾಮಾಜಿಕ ಉನ್ನತೀಕರಣಕ್ಕೆ ಸರ್ಕಾರಗಳು (ರಾಜ್ಯ ಮತ್ತು ಕೇಂದ್ರ) ಕೈಗೊಂಡಿರುವ ಕ್ರಮಗಳೇನು; ಕಳೆದ ಐದು ವರ್ಷಗಳಲ್ಲಿ ನೀಡಲಾಗಿರುವ ಒಟ್ಟು ಅನುದಾನವೆಷ್ಟು; (ಮಾಹಿತಿ ನೀಡುವುದು)</td><td>2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ – 1,04,74,992 ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆ – 42,48,987 ಇರುತ್ತದೆ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಸಮಾಜ ಕಲ್ಯಾಣ ಇಲಾಖೆ ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಅನುಷ್ಠಾನ ಮಾಡುತ್ತಿವೆ.<br><br>ಕಳೆದ 5 ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ವೆಚ್ಚ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ:<br>(ರೂ. ಕೋಟಿಗಳಲ್ಲಿ)
<table>
<tr><th>ವರ್ಷ</th><th>ಎಸ್.ಸಿ.ಎಸ್.ಪಿ</th><th>ಟಿ.ಎಸ್.ಪಿ</th></tr>
<tr><td>2015-16</td><td>11527.37</td><td>4385.51</td></tr>
<tr><td>2016-17</td><td>13315.15</td><td>5150.10</td></tr>
<tr><td>2017-18</td><td>18503.43</td><td>7700.21</td></tr>
<tr><td>2018-19</td><td>19424.70</td><td>7913.49</td></tr>
<tr><td>2019-20</td><td>18623.49</td><td>7227.59</td></tr>
</table>
</td></tr>
<tr><td>ಆ)</td><td>ಪರಿಶಿಷ್ಟ ಜಾತಿ ಮತ್ತು ಪಂಗಡದವರು ಪೂರ್ಣ ಸ್ವಾವಲಂಬನೆ ಸಾಧಿಸಿ ಅಸಮಾನತೆಯಿಂದ ಹೊರಬರಲು ಬೇಕಾಗಬಹುದಾದ ಮೀಸಲಾತಿಯ ಅವಧಿ ಎಷ್ಟು; ಇನ್ನೂ ಎಷ್ಟು ವರ್ಷ ಮೀಸಲಾತಿ ನೀಡಬೇಕಾಗಬಹುದು; (ಮಾಹಿತಿ ನೀಡುವುದು)</td><td rowspan="2">ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಜಾರಿಯಲ್ಲಿರುತ್ತದೆ. ಇದಕ್ಕೆ ಯಾವುದೇ ಅವಧಿ ನಿಗದಿಪಡಿಸಿರುವುದಿಲ್ಲ.</td></tr>
<tr><td>ಇ)</td><td>ಮೀಸಲಾತಿ ಅವಧಿಯ ಬಗ್ಗೆ ಕೇಂದ್ರ ಅಥವಾ ರಾಜ್ಯದ ಯಾವುದಾದರು ಸರ್ಕಾರಿ ಆದೇಶವಿದ್ದಲ್ಲಿ ಪ್ರತಿಯನ್ನು ಒದಗಿಸುವುದು?</td></tr>
</table>

ಸಕಇ 81 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.